# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 35 (22) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11-07-2018 |
| ಉತ್ತರಿಸುವವರು | : | ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ<br>ಹಾಗೂ ಜೀವನೋಪಾಯ ಸಚಿವರು |

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>2018ರ ಮೇ ಮತ್ತು ಜೂನ್ ತಿಂಗಳಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಉಂಟಾದ ಪರಿಣಾಮಗಳೇನು; ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td rowspan="2">ಕೊಡಗು ಜಿಲ್ಲೆಯಲ್ಲಿ ಮೇ2018 ರಿಂದ ದಿನಾಂಕ:6-7-2018ರವರೆಗೆ ಈ ಕೆಳಕಂಡಂತೆ ಹಾನಿ ಸಂಭವಿಸಿರುತ್ತದೆ.
<table>
<tr><th>ಹಾನಿಯ ವಿವರ</th><th>ಸಂಖ್ಯೆ</th><th>ಅಂದಾಜು ನಷ್ಟ (ರೂ. ಲಕ್ಷಗಳಲ್ಲಿ)</th></tr>
<tr><td>ಮಾನವ ಪ್ರಾಣ ಹಾನಿ</td><td>03</td><td>-</td></tr>
<tr><td>ವಾಸದ ಮನೆ ಹಾನಿ</td><td>143</td><td>49.01</td></tr>
<tr><td>ಜಾನುವಾರು ಪ್ರಾಣ ಹಾನಿ</td><td>01</td><td>0.25</td></tr>
<tr><td>ಒಟ್ಟು</td><td>147</td><td>49.26</td></tr>
</table>
<table>
<tr><th>ಹಾನಿಯ ವಿವರ</th><th>ಇಲಾಖೆ</th><th>ಕಿ.ಮೀ.</th><th>ಸಂಖ್ಯೆ</th><th>ಅಂದಾಜು ನಷ್ಟ</th></tr>
<tr><td rowspan="5">ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿ</td><td>ಲೋಕೋಪಯೋಗಿ ಇಲಾಖೆ</td><td>33.31</td><td>23</td><td>853.25</td></tr>
<tr><td>ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ</td><td>66.35</td><td>33</td><td>627.40</td></tr>
<tr><td>ಚೆಸ್ಕಾಂ</td><td>0</td><td>1555</td><td>92.44</td></tr>
<tr><td>ನಗರ ಸಭೆ, ಮಡಿಕೇರಿ</td><td>0</td><td>8</td><td>69.00</td></tr>
<tr><td>ನಗರ ಸ್ಥಳೀಯ ಸಂಸ್ಥೆಗಳು</td><td>2</td><td>11</td><td>37.16</td></tr>
<tr><td colspan="2">ಒಟ್ಟು</td><td>101.66</td><td>1630</td><td>1679.25</td></tr>
</table>
ನೈಸರ್ಗಿಕ ವಿಕೋಪದಿಂದ ಮನೆ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ಹಾಗೂ ಶೇ.15 ರಿಂದ 75ರ ವರೆಗಿನ ಶೇಕಡವಾರನ್ನು ಅವಲಂಭಿಸಿ ಪರಿಹಾರವನ್ನು ನೀಡುವುದು ಹಾಗೂ ಶೆ.75ಕ್ಕಿಂತ ಹೆಚ್ಚಿನ ಹಾನಿಯಾದಲ್ಲಿ ಮಾರ್ಗಸೂಚಿಯಲ್ಲಿ ಮನೆ ಹಾನಿ ಪರಿಹಾರಕ್ಕೆ ನಿಗಧಿಪಡಿಸಿರುವ ಗರಿಷ್ಠ ಮೊತ್ತ ರೂ.95,100/-ಗಳನ್ನು ಪಾವತಿಸಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ.<br>
ಕೊಡಗು ಜಿಲ್ಲೆಗೆ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗಾಗಿ ದಿನಾಂಕ:14.06.2018ರಂದು ರೂ.5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ.10.22 ಕೋಟಿ ಅನುದಾನ ಲಭ್ಯವಿರುತ್ತದೆ. ಸದರಿ ಅನುದಾನದಲ್ಲಿ ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿಯ ಪ್ರಕಾರ ಪರಿಹಾರ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.</td></tr>
<tr><td>ಆ</td><td>ಮಳೆಯಿಂದ ಜಿಲ್ಲೆಯಲ್ಲಿ ಉಂಟಾದ ನಷ್ಟದ ಅಂದಾಜು ಎಷ್ಟು; ಈ ನಷ್ಟ ಭರ್ತಿಯನ್ನು ತುಂಬಲು ಸರ್ಕಾರ ವಿಶೇಷ ಅನುದಾನವನ್ನು ನೀಡುವುದೇ; (ವಿವರ ನೀಡುವುದು)</td></tr>
</table>

| | | |
|---|---|---|
| ಇ | ಮಳೆಯಲ್ಲಿ ಕೊಚ್ಚಿಹೋಗಿ ಪ್ರಾಣ ಕಳೆದುಕೊಂಡವರುಗಳಿಗೆ ನೀಡಲಾದ ಪರಿಹಾರಗಳೇನು? (ವಿವರ ನೀಡುವುದು) | ಮಳೆಯಿಂದ ಉಂಟಾಗಿರುವ ನಷ್ಟದ ಪ್ರಕರಣಗಳಿಗೆ ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಈ ಕೆಳಕಂಡಂತೆ ಪರಿಹಾರ ಪಾವತಿಸಲಾಗಿದೆ.<br>ಮಾನವ ಜೀವ ಹಾನಿ 2 ಪ್ರಕರಣಗಳಿಗೆ - ರೂ.10.00 ಲಕ್ಷ<br>ಜಾನುವಾರ ಹಾನಿ 1 ಪ್ರಕರಣಕ್ಕೆ - ರೂ.0.25 ಲಕ್ಷ |

**ಸಂಖ್ಯೆ: ಕಂಇ 121 ಟಿಎನ್ಆರ್ 2018**

(ಆರ್.ವಿ. ದೇಶಪಾಂಡೆ)
ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಸಚಿವರು